ಆ) ಇದರ ಜೊತೆಗೆ ರಾಜ್ಯ ಸರ್ಕಾರವು ತನ್ನ ಪಾಲಿನ ರೂ.490.99 ಲಕ್ಷಗಳನ್ನು ನೀಡಲಿದೆ. ಇದರ ಕಾರ್ಯಕ್ರಮವಾರು ವಿವರಗಳನ್ನು ಅನುಬಂಧ–Iರಲ್ಲೇ ನೀಡಲಾಗಿದೆ.

ಇ) ಹೌದು

ಈ) ಹೌದು

ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲ್ಲೂಕಿನಲ್ಲಿ ಬೆಳೆ ವಿಮೆ

3211(3682) : ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲ್ಲೂಕಿಗೆ ಕಳೆದ ಸಾಲಿನಲ್ಲಿ ಬೆಳೆ ವಿಮೆ ಮಂಜೂರಾಗಿದಿಯೇ;

ಆ) ಆಗದಿದ್ದರೆ ಕಾರಣವೇನು:

ಇ) ಮಂಜೂರು ಮಾಡಿರುವ ಕ್ರಮ ಕೈಕೊಳ್ಳಲಾಗಿದಿಯೇ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ರಾಗಿ, ಜೋಳ, ಸೂರ್ಯಕಾಂತಿ ನೆಲಗಡಲೆ(ಶೇಂಗಾ) ಕಬ್ಬು ಮತ್ತು ಹತ್ತಿ (ಮಳೆ ಆಶ್ರಿತ) ಹಾಗೂ ಚಾಮರಾಜನಗರ ತಾಲ್ಲೂಕಿನಲ್ಲಿ ರಾಗಿ ಜೋಳ, ಸೂರ್ಯಕಾಂತಿ, ನೆಲಗಡಲೆ (ಶೇಂಗಾ), ಭತ್ತ (ನೀರಾವರಿ) ಮತ್ತು ಕಬ್ಬು ಬೆಳೆಗಳನ್ನು 2002ರ ಮುಂಗಾರು ಹಂಗಾಮಿನಲ್ಲಿ ಬೆಳೆ ವಿಮೆ ವ್ಯಾಪ್ತಿಗೆ ತರಲಾಗಿತ್ತು. ಈ ಬೆಳೆಗಳಲ್ಲಿ ರಾಗಿ, ಜೋಳ ಮತ್ತು ಸೂರ್ಯಕಾಂತಿ ಬೆಳೆಗಳಿಗೆ ಭಾರತೀಯ ಸಾಮಾನ್ಯ ವಿಮಾ ನಿಗಮವು ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಿರುತ್ತದೆ. ವಿವರಗಳನ್ನು ಅನುಬಂಧ–I ರಲ್ಲಿ ನೀಡಲಾಗಿದೆ. ಭತ್ತ ಮತ್ತು ನೆಲಗಡಲೆ (ಶೇಂಗಾ) ಬೆಳೆಗಳಿಗೆ ಭಾರತೀಯ ಸಾಮಾನ್ಯ ವಿಮಾ ನಿಗಮವು ಮಾಹಿತಿಯನ್ನು ಕ್ರೋಢೀಕರಿಸುತ್ತಿದೆ. ಸಧ್ಯದಲ್ಲೇ ಬೆಳೆ ವಿಮಾ ನಷ್ಟ ಪರಿಹಾರವನ್ನು ಬಿಡುಗಡೆ ಮಾಡಲಾಗುವುದು. ಕಬ್ಬು ಮತ್ತು ಹತ್ತಿ ಬೆಳೆಗಳು ಧೀರ್ಘಾವಧಿ ಬೆಳೆಗಳಾಗಿದ್ದು, ಭಾರತೀಯ ಸಾಮಾನ್ಯ ವಿಮಾ ನಿಗಮಕ್ಕೆ ಇನ್ನೂ ಬೆಳೆ ಕಟಾವು ಪ್ರಯೋಗಗಳ ಇಳುವರಿ ಮಾಹಿತಿಯು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ಬರಬೇಕಾಗಿದೆ.

ಆ) ಭತ್ತ (ನೀರಾವರಿ) ಹಾಗೂ ನೆಲಗಡಲೆ (ಶೇಂಗಾ) ಬೆಳೆಗಳಿಗೆ ಭಾರತೀಯ ಸಾಮಾನ್ಯ ವಿಮಾ ನಿಗಮವು ಮಾಹಿತಿಯನ್ನು ಕ್ರೋಢೀಕರಿಸುತ್ತಿರುವುದರಿಂದ ಹಾಗೂ ದೀರ್ಘಾವಧಿ ಬೆಳೆಗಳಾದ ಕಬ್ಬು ಮತ್ತು ಹತ್ತಿ ಬೆಳೆಗಳ ಇಳುವರಿ ಮಾಹಿತಿ ಭಾರತೀಯ ಸಾಮಾನ್ಯ ವಿಮಾ ನಿಗಮಕ್ಕೆ ಇನ್ನೂ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು ಕಳುಹಿಸದೇ ಇರುವ ಪ್ರಯುಕ್ತ, ಈ ಬೆಳೆಗಳಿಗೆ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸುವುದು ತಡವಾಗಿರುತ್ತದೆ.

ಇ) ಭತ್ತ (ನೀರಾವರಿ) ಹಾಗೂ ನೆಲಗಡಲೆ (ಶೇಂಗಾ) ಬೆಳೆಗಳಿಗೆ ಮಾಹಿತಿಯನ್ನು ಕ್ರೋಢೀಕರಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಭಾರತೀಯ ಸಾಮಾನ್ಯ ವಿಮಾ ನಿಗಮಕ್ಕೆ ಸೂಚಿಸಲಾಗಿದೆ. ಕಬ್ಬು ಮತ್ತು ಹತ್ತಿ ಬೆಳೆಗಳ ಬೆಳೆ ಕಟಾವು ಪ್ರಯೋಗಗಳ ಇಳುವರಿ ಮಾಹಿತಿಯನ್ನು ಆಗಸ್ಟ್ 2003ರ ಅಂತ್ಯದ ಒಳಗೆ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು ಭಾರತೀಯ ಸಾಮಾನ್ಯ ವಿಮಾ ನಿಗಮಕ್ಕೆ ಕಳುಹಿಸಲಿದೆ.